| | |
|---|---|
| JAIN COLLEGE V V Puram<br>1st PUC MOCK Paper – Jan. 2024 | **Course:** 1st year PUC<br>**Subject:** ಕನ್ನಡ<br>**Max. Marks:** 80<br>**Duration:** 3:15 hour |

## ಅ–ವಿಭಾಗ

**I ಅ) ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳಲ್ಲಿ ಆರಿಸಿ ಬರೆಯಿರಿ.** **10x1=10**

1) ಅಲ್ಲಮಪ್ರಭುವಿನ ವಚನದಂತೆ ಕಾಲುಗಳನ್ನು ಯಾವುದಕ್ಕೆ ಹೋಲಿಸಲಾಗಿದೆ?
ಅ) ಚಕ್ರಕ್ಕೆ ಆ) ಕೈಗಳಿಗೆ ಇ) ಕಣ್ಣುಗಳಿಗೆ ಈ) ತಲೆಗೆ
2) ಚೋಳ ದೇಶವನ್ನು ಆಳುತ್ತಿದ್ದ ದೊರೆ ಯಾರು ?
ಅ) ಮಾದಾರ ಚೆನ್ನ ಆ) ಕರಿಕಾಲ ಚೋಳ ಇ) ಶರಣ ಈ) ಭಕ್ತ
3) ಕಪ್ಪೆಗಳು ಎಲ್ಲಿ ಹುಟ್ಟಿ ಕೂಗುತ್ತವೆ ?
ಅ) ಮರದಲ್ಲಿ ಆ) ನೆರಳಲ್ಲಿ ಇ) ಕಲ್ಲಿನಲ್ಲಿ ಈ) ಮಠದಲ್ಲಿ
4) ಅಖಂಡ ಕರ್ನಾಟಕದ ಮುಖ್ಯಮಂತ್ರಿ ಯಾರು?
ಅ) ಸಿದ್ಧರಾಮಯ್ಯ ಆ) ಪಂಪ ಇ) ಯಡಿಯೂರಪ್ಪ ಈ) ಕುಮಾರಸ್ವಾಮಿ
5) ಗ್ರಾಮದ ಅಧಿದೇವತೆ ಯಾರು?
ಅ) ಊರಮ್ಮ ಆ)ಸರಸ್ವತಿ ಇ) ನಾಗಮ್ಮ ಈ)ಚಾಮುಂಡಿ
6) ನಿರೂಪಕರನ್ನು ರೂಪಿಸಿದ ಶಿಲ್ಪಿ ಯಾರು?
ಅ) ಸೂಡಿ ಆ) ಲಾಲ ಇ) ದೇಶಪಾಂಡೆ ಈ) ಶಾಸ್ತ್ರೀಮಾಸ್ತರರು
7) ಮಾಯಾದೇವಿ ದೇವಾಲಯ ಹೇಗಿತ್ತು?
ಅ) ತ್ರಿಭುಜ ಆ) ಗೋಳಾಕಾರ ಇ) ಚೌಕಾಕಾರ ಈ) ಸಮತಟ್ಟಾಗಿತ್ತು
8) ಪಿಶಾಚಿಗಳು ಮನುಷ್ಯರನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ.
ಅ) ಶಕ್ತಿಯ ಮೂಲಕ ಆ) ಯುಕ್ತಿಯ ಮೂಲಕ ಇ) ದೌರ್ಬಲ್ಯದ ಮೂಲಕ ಈ) ದೇಹದ ಮೂಲಕ
9) ರಾಜಕುಮಾರಿಗೆ ಬಂದ ರೋಗ ಯಾವುದು?
ಅ) ಹೊಟ್ಟೆ ನೋವು ಆ) ಕ್ಯಾನ್ಸರ್ ಇ) ಹೃದಯ ಬೇನೆ ಈ) ಸಕ್ಕರೆ ಖಾಯಿಲೆ
10) ಕತ್ತಲೆಯ ನಿಜ ಜನಕ ಯಾರು?
ಅ) ಪಿಶಾಚಿಗಳು ಆ) ಸೈತಾನ ಇ) ಮಹಾರಾಜ ಈ) ಮಂತ್ರಿ

**ಆ) ಕೆಳಗೆ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳ ಭರ್ತಿ ಮಾಡಿ.** **5x1=5**
**(ಉತ್ತರಗಳು : ಮನುಷ್ಯವರ್ಗಕ್ಕೆ.ರಾವ್ ಸಾಹೇಬ್, ಮೇನಕೆ, ಸಿಪಾಯಿ ದಂಗೆ, ಜ್ಯೋತಿಷ್ಯದ, ಬರ ಬಂದರೂ)**

11) ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ____________
12) ಜನ ನಿರಾಶೆ, ಸಮಸ್ಯೆಗಳಲ್ಲಿದ್ದಾಗ ___________ ಮೊರೆ ಹೋಗುತ್ತಾರೆ.
13) ಸರ್ಕಾರ ರಂಗರಾವ್ ಅವರಿಗೆ ನೀಡಿದ ಬಿರುದು _________
14) ಶಕುಂತಲೆಯ ತಾಯಿಯ ಹೆಸರು __________
15) ರೈತರು ________ತೆರಿಗೆಯನ್ನು ಪಾವತಿಸಬೇಕಾಯಿತು.

**ಇ) ಹೊಂದಿಸಿ ಬರೆಯಿರಿ.** **5x1=5**

| | |
|---|---|
| 16) ರನ್ನ | ಅ) ಜೀವಕೆ ಇಂಧನ |
| 17) ಹರಿಹರ | ಆ) ಅಖಂಡ ಕರ್ನಾಟಕ |
| 18) ಕನಕದಾಸರು | ಇ) ದೇವನೊಲಿದನ ಕುಲವೆ ಸತ್ಕುಲಂ |
| 19) ಕುವೆಂಪು | ಈ) ದುರ್ಯೋಧನ ವಿಲಾಪ |
| 20) ಬಸವರಾಜ ವಕ್ಕುಂದ | ಉ) ತಲ್ಲಣಿಸದಿರು ಕಂಡ್ಯ ತಾಳು ಮನವೆ |
| | ಊ) ಎಂದಿಗೆ |

## ಆ–ವಿಭಾಗ

**II ಅ. ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **3x2=6**

21) ದುಶ್ಯಾಸನನು ಅಣ್ಣನಿಗೆ ತೋರಿದ್ದ ವಿನಯಶೀಲತೆ ಯಾವುದು?
22) ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?
23) ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?
24) ಹಕ್ಕಿಗಳು ತಮ್ಮ ಕಂಠಗಳಿಂದ ಏನೇನನ್ನು ಮಾರ್ದನಿಸಬೇಕಿದೆ?

**ಆ. ಎರಡು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **2x2=4**

25) ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
26) ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?
27) ಕಾಡಿನಲ್ಲಿ ಹುಲಿಗಳೆಲ್ಲ ದಿಕ್ಕಾಪಾಲಾಗಿ ಏಕೆ ಓಡಿದವು?

**ಇ. ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **3x2=6**

28) ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದ?
29) ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?
30) ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
31) ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

## ಇ–ವಿಭಾಗ

**III ಅ. ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ತಿಳಿಸಿ.** **2x3=6**

32) ಆನಜೀವೆಂ ಪೃಥೆಯಜೀವಳ್.
33) ಭಾಷೆಹೀನರ ಕಂಡು ನಾಚಿಕೆಯಾಯಿತು.
34) ಹಣ್ಣಿನಂಗಡಿಯಾಗು ನೀನೂನು.

**ಆ. ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ತಿಳಿಸಿ.** **1x3=3**

35) ಮನುಷ್ರು ಸಾಯ್ದೆ ಕಲ್ಲು ಸತ್ತಾದ ಸುಮ್ಕಿರು ಮಂತೆ.
36) ಜ್ಯೋತಿಷ್ಯ ಒಂದು ವಾಣಿಜ್ಯವಾಗಿದೆ.

**ಇ. ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ತಿಳಿಸಿ.** **1x3=3**

37) ಜನ ಎಲ್ಲಿ ಸೇರಿದರೆ ಅಲ್ಲೇ ದರ್ಬಾರು.
38) ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ. ಹಿಂದೆ ಹಿಂದಲ್ಲ.

## ಈ–ವಿಭಾಗ

**VI ಅ. ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

39) ದುರ್ಯೋಧನ ರಣರಂಗದಲ್ಲಿ ನಡೆದುಬಂದ ಬಗೆಯನ್ನು ಕವಿ ಹೇಗೆ ವರ್ಣಿಸಿದ್ದಾನೆ?
40) ಕರಿಕಾಲಚೋಳ ಶಿವನನ್ನು ಅರ್ಚಿಸುತ್ತಿದ್ದ ರೀತಿಯನ್ನು ವರ್ಣಿಸಿ.
41) ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ.
42) 'ಮತ್ತೆ ಸೂರ್ಯ ಬರುತ್ತಾನೆ' ಕವಿತೆಯ ಆಶಯವನ್ನು ಚರ್ಚಿಸಿ.

**ಆ. ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **1x4=4**

43) ಗಾಂಧಿ ಎಂಬ ಹುಡುಗನ ಸಾವಿನ ಸಂದರ್ಭವನ್ನು ವಿವರಿಸಿ.
44) ರಾಗಿಮುದ್ದೆ ಕುರಿತು ಇರುವ ಹತ್ತಾರು ಮೆಚ್ಚುಗೆಯ, ನಂಬಿಕೆಯ ಮಾತುಗಳಾವುವು?
45) ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕಥೆ ಯಾವುದು?

**ಇ. ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **1x4=4**

46) ಬೋಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತ ಹೇಗೆ ಪರಿಚಯಿಸುತ್ತಾನೆ ?
47) ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು ?
48) 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ? ವಿಮರ್ಶಿಸಿ.

**ಭಾಷಾಭ್ಯಾಸ**

**V ಅ. ನಾಲ್ಕು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=8**

49) ಎರಡು ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.
ರವಿ, ಇಳೆ, ತರು, ನೃಪ

50) ಎರಡು ಪದಗಳಿಗೆ ನಾನಾರ್ಥಕಗಳನ್ನು ಬರೆಯಿರಿ.
ಅಡಿ, ಕರ, ಗುರು, ಕಾಡು

51) ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.
ಮೊರೆಯಿಡು, ಚಾಟಿಏಟು, ಅಜಗಜಾಂತರ, ದಾರಿದೀಪ

52) ಎರಡು ಪದಗಳನ್ನು ಬಿಡಿಸಿ ಬರೆಯಿರಿ.
ದಿವ್ಯಾನ್ನ, ಊರೂರು, ಜಲಾಂಜಲಿ, ವೈದ್ಯಾಧಿಕಾರಿ

53) ದ್ವಿರುಕ್ತಿಗಳಿಗೆ ಎರಡು ಉದಾಹರಣೆ ಕೊಡಿ.

54) ಎರಡು ಪದಗಳ ತತ್ಸಮಗಳನ್ನು ಬರೆಯಿರಿ.
ನಕಾಶೆ, ಬಣ್ಣ, ಸಿಂಗಾರ, ಆಗಸ

**ಆ. ಒಂದನ್ನು ಕುರಿತು ಪ್ರಬಂಧ ಬರೆಯಿರಿ.** **1X4 =4**

**55)** ಪುಸ್ತಕಗಳ ಮಹತ್ವ **ಅಥವಾ**

56) ಯೋಗಾಭ್ಯಾಸ

**ಪತ್ರಲೇಖನ**

**ಇ. ಒಂದನ್ನು ಕುರಿತು ಪತ್ರ ಬರೆಯಿರಿ.** **1X4 =4**

57) ನೀವು ಕೈಗೊಂಡ ಪ್ರವಾಸ ಅನುಭವವನ್ನು ಕುರಿತು ನಿಮ್ಮ ಸ್ನೇಹಿತರಿಗೊಂದು ಪತ್ರ ಬರೆಯಿರಿ.

**ಅಥವಾ**

58) ಅನಾರೋಗ್ಯ ಕಾರಣ ಮೂರು ದಿನಗಳ ರಜೆ ಕೇಳಿ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.

*****